No B G 155 20 — 6 —72

55th Year of Publication ‘Satyavadi’ daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದ್ದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಪಾಕೀಸ್ತಾನದಲ್ಲಿ ಬಂಗ್ಲಾ ಹುಡುಗಿಯರಿಗೆ ಅಮಾನುಷ ಚಿತ್ರ ಹಿಂಸೆ

ಅಪಹೃತ ಹುಡುಗಿಯರು

ಢಾಕಾ— ಬಂಗ್ಲಾ ದೇಶದಲ್ಲಿ ಪಾಕಿ ಸ್ತಾನ ಸೈನ್ಯ ಪತನವಾದಾಗ, ಅಲ್ಲಿಂದ ಅಪಹರಿಸಲ್ಪಟ್ಟ 755 ಶಾಲೆಯ ಮತ್ತು ಕಾಲೇಜು ವಿದ್ಯಾರ್ಥಿನಿಯರಾದ ಬಂಗಾಳಿ ಹುಡುಗಿಯರು ಕರಾಚಿ ಮತ್ತು ಕ್ವೆಟ್ಟಾದಲ್ಲಿ ಕಾಂಸೆಂಟ್ರೇಷನ್ ಕ್ಯಾಂಪುಗಳಲ್ಲಿ ಅಮಾನುಷ ಹಿಂಸೆಗೆ ತುತ್ತಾಗಿರುವರೆಂದು ಅಲ್ಲಿಂದ ತಪ್ಪಿಸಿಕೊಂಡು ಬಂದವರೊಬ್ಬರು ಹೇಳಿದ್ದಾರೆ.

★

ಜಾಕ್‌ಪಾಟ್ ಹಣ

ಬೆಂಗಳೂರು— ಭಾನುವಾರದ ರೇಸಿನಲ್ಲಿ ಜಾಕ್‌ಪಾಟ್ ಹಣ ಪಡೆಯುವ ಟಿಕೀಟು ಯಾವದೂ ಇಲ್ಲದೆ ಶೇಖರವಾಗಿದ್ದ ರೂ 196733 ಮುಂದಕ್ಕೆ ಇಡಲಾಯಿತು

●

ಮಲೇರಿಯಾ

ನವದೆಹಲಿ— ಮಲೇರಿಯಾ ಇರುವ ಆಗ್ನೇಯ ಏಷ್ಯಾ ದೇಶಗಳಲ್ಲಿ ಭಾರತವೂ ಒಂದಾಗಿದೆ.

●

ಕೊಲೆಪಾತಕ ಯುವಕ

ಬಿಹಾರಷರೀಫ್— ದರ್ಬೆರಾಪುರ ಗ್ರಾಮದಲ್ಲಿ ಪ್ರವಾಕರ ಎಂಬ ಯುವಕ ತನ್ನ ತಂದೆ, ತಾಯಿ, ಸಹೋದರಿಯನ್ನು ಗುಂಡು ಹೊಡೆದು ಕೊಂದನು — ಅತನ ತಾತನನ್ನು ಕೊಲ್ಲಲು ಪ್ರಯತ್ನಿಸಿದಾಗ ಅವನು ತಪ್ಪಿಸಿಕೊಂಡನು — ಈ ಕೊಲೆಪಾತಕನು ತಲೆತಪ್ಪಿಸಿಕೊಂಡಿರುವನು.

★

ತೆಕರಿ ಪ್ರಾಜೆಕ್ಟು

ನವದೆಹಲಿ— ಉತ್ತರ ಪ್ರದೇಶದ ರೂ 197.92 ಕೋಟಿಯ ರಾಪ್ಟಿಸಾಕರದ ತೆಹರಿ ಪ್ರಾಜೆಕ್ಟನ್ನು ಪ್ಲಾನಿಂಗ್ ಕಮಿಷನ್ ಅನುಮೋದಿಸಿದೆ.

ಹಾಲೆಂಡಿನ ನೆರವು

ಮದರಾಸು— ಹಾಲೆಂಡು ಭಾರತಕ್ಕೆ 30 ವರ್ಷ ಅವಧಿಯ ಶೇಕಡ 2ನರೆ ಬಡ್ಡಿಯ ಸಾಲವನ್ನು ಭಾರತ ಸ್ವೀಕರಿಸಿದಾಗ, 4 ವಾರ್ಷಿಕ ಕಂತುಗಳಲ್ಲಿ ಕೊಡುವುದೆಂದು ನೆದರ್ಲಾಂಡು ರಾಯಭಾರಿ ಶ್ರೀ ಕಾಲ್ಟೊಯೆನ್ನರು ಸತ್ಕಿಕೆಯವರಿಗೆ ತಿಳಿಸಿದರು

★

ಅಲಿಕೆಲ್ಲು ಮಳೆ ಹಾವಳಿ

ದಾವಣಗೆರೆ— ಶುಕ್ರವಾರ-ಶನಿವಾರ ಆದ ಅಲಿಕಲ್ಲು ಮಳೆಯಿಂದ ಹೈ ಬ್ರೀಡ್ ಜೋಳ ಮತ್ತು ಕಬ್ಬಿನ ಬೆಳೆಗೆ ನಷ್ಟವಾಗಿದೆ : ಅನೇಕ ಗುಡಿಸಲುಗಳ ಚಾವಣಿಗಳು ಡ್ಯಾಮೇಜಾಗಿದೆ.

★

ಉಪಾಧ್ಯಾಯರ ಪ್ರಾತಿನಿಧ್ಯ

ಬೆಂಗಳೂರು— ವಿಶ್ವವಿದ್ಯಾನಿಲಯಸಂಸ್ಥೆಗಳಲ್ಲಿ ಉಪಾಧ್ಯಾಯರಿಗೆ ಪ್ರಾತಿನಿಧ್ಯ ಕೊಡಲು ಅನುಕೂಲಿಸುವಂತೆ, ಅದರ ಶಾಸನದ ತಿದ್ದುಪಡಿ ಮಾಡುವಂತೆ, ಬೆಂಗಳೂರು ವಿಶ್ವವಿದ್ಯಾನಿಲಯದ ಕಾಲೇಜು ಉಪಾಧ್ಯಾಯರ ಸಂಘದ ಅಧ್ಯಕ್ಷ ಡಾ॥ ದ್ವಾರ್ಕಾನಾಥ್‌ರವರು ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ.

★

ಭೂಮಿ ಕುಸಿತದಿಂದ ಸಾವು

ಹಾಂಕಾಂಗ್— 3 ದಿನಗಳ ವಿಪರೀತ ಮಳೆಯಿಂದ ಎರಡು ಕಡೆಯಲ್ಲಿ ಭೂಮಿ ಕುಸಿದು 100 ಮಂದಿ ಸತ್ತರು.

★

ಭಾರತದ ಸಾಹಸ

ನವದೆಹಲಿ— ಭಾರತದ ವಿದ್ಯುತ್ ಯೋಜನೆಗಳ ಒಕ್ಕೂಟವು ಕಾರ್ಯಾರಂಭ ಮಾಡಿದ ಎರಡು ವರ್ಷಗಳ ಅವಧಿಯಲ್ಲಿ ವಿದೇಶಗಳಲ್ಲಿ ನಾಲ್ಕು ವಿದ್ಯುತ್ ಯೋಜನೆಗಳನ್ನು ಕೈಗೊಂಡಿದೆ.

ಗಲಭೆ ಪ್ರತಿಧ್ವನಿ

ಲಕ್ನೋ— ಫಿರೋಜಾಬಾದು ಮತ್ತು ವಾರಣಾಸಿಯಲ್ಲಿ ಸಾವಿನ ಸಂಖ್ಯೆ 23 ಕ್ಕೆ ಏರಿದೆ — ಘರ್ಷಣೆಗಳು ನಡೆಯುತ್ತಲೇ ಇವೆ.

★

ಆಡಳಿತ ಕಾಂಗ್ರೆಸ್ಸಿಗೆ ಜಯ:

ಮೈಸೂರು— ಮೈಸೂರು ಜಿಲ್ಲಾ ಆಡಳಿತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಜಯದೇವರಾಜೇ ಅರಸಿನವರು ಭಾನುವಾರ ನಡೆದ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿಸಲ್ಪಟ್ಟರು — ಹಳೇ ಕಾಂಗ್ರೆಸ್ ಸ್ಪರ್ಧಿ ಶ್ರೀ ಇಲಿಯಾಸ್ ಅಹ್ಮದ್ ಪರಾಜಿತರಾದರು

★

ಭಾರತದಿಂದ ರಫ್ತು

ನವದೆಹಲಿ— 71-72 ರಲ್ಲಿ 44 55 ಕೋಟಿ ರೂಪಾಯಿ ಬೆಲೆಯ ಯಂತ್ರಗಳನ್ನು ರಫ್ತು ಮಾಡಿ ಭಾರತವು ಹೊಸ ದಾಖಲೆ ಸ್ಥಾಪಿಸಿದೆ.

○

ತೈಲ ಉತ್ಪಾದನೆ

ನವದೆಹಲಿ— ಭಾರತವು 1971 ರಲ್ಲಿ 72 ಲಕ್ಷ ಟನ್ ಕಚ್ಚಾ ತೈಲವನ್ನು ಉತ್ಪಾದಿಸಿತು

○

ಅಲಾರಂ ಸರಪಳಿ ಎಳೆತ

ನವದೆಹಲಿ— ಈ ಮಾರ್ಚ್‌ನಲ್ಲಿ ರೈಲಿನಲ್ಲಿ ಪ್ರಯಾಣೀಕರು 16904 ಸಲ ಅಲಾರಂ ಸರಪಳಿ-ಎಳೆದರು.

★

ತೆಂಗಿನ ವ್ಯಾಪಾರ

ಬೆಂಗಳೂರು— 71-72 ರಲ್ಲಿ 149.59 ಕೋಟಿ ರೂ ಬೆಲೆಬಾಳುವ 52312 ಮೆಟ್ರಿಕ್ ಟನ್‌ಗಳಷ್ಟು ತೆಂಗು ಮತ್ತು ತೆಂಗಿನ ಉತ್ಪಾದನೆಗಳನ್ನು ರಫ್ತು ಮಾಡಲಾಯ್ತು

ಯುದ್ಧೋಪಕರಣ ಸಾಮಗ್ರಿ

ನವದೆಹಲಿ— ಕೇಂದ್ರ ಸಂರಕ್ಷಣಾ ಇಲಾಖೆ ಆಡಳಿತದಲ್ಲಿರುವ 38 ಯುದ್ಧೋಪಕರಣ ತಯಾರಿಕಾ ಕಾರ್ಖಾನೆಗಳು 71-72 ರಲ್ಲಿ 314 ಕೋಟಿ ರೂಪಾಯಿ ಬೆಲೆಯ ಸಾಮಗ್ರಿಗಳನ್ನು ಉತ್ಪಾದಿಸಿದವು

★

ಪಾಕಿಸ್ತಾನದಲ್ಲಿ ರಕ್ಷಣಾ ಖರ್ಚು

ನವದೆಹಲಿ— ಪಾಕಿಸ್ತಾನವು ಜುಲೈನಿಂದ ಪ್ರಾರಂಭವಾಗುವ ಆರ್ಥಿಕ ವರ್ಷದಲ್ಲಿ ರಕ್ಷಣೆಗೆ ರೂ 415 ಕೋಟಿ ಖರ್ಚು ಮಾಡಲಿದೆ.

★

ಸಿಗರೇಟು

ವಿಶ್ವ ಆರೋಗ್ಯ ಸಂಸ್ಥೆಯು ಇತ್ತೀಚೆಗೆ ನಡೆಸಿದ “ನಿಮ್ಮ ಹೃದಯದಿಂದ ನಿಮ್ಮ ಆರೋಗ್ಯ’ ಎಂಬ ಪ್ರಚಾರ ಚಳುವಳಿಯಿಂದ ಧೂಮಪಾನವು ಹೃದಯಾಘಾತ ಶ್ವಾಸಕೋಶದ ಕ್ಯಾನ್ಸರ್, ಶ್ವಾಸನಾಳದ, ಊತ ಮುಂತಾದ ರೋಗಗಳಿಗೆ ಕಾರಣ ಎಂಬುದು ನಿಸ್ಸಂಶಯವಾಗಿ ಗೊತ್ತಾಗಿದೆ.

ಧೂಮಪಾನದಿಂದ ಹೃದಯದ ಬಡಿತ ಹೆಚ್ಚಾಗಿ, ರಕ್ತದ ಒತ್ತಡ ಏರಿ, ಚರ್ಮದ ರಕ್ತನಾಳಗಳು ಸಂಕುಚಿತಗೊಳ್ಳುತ್ತವೆಂಬುದು ವೈಜ್ಞಾನಿಕ ಅಧ್ಯಯನದಿಂದ ಗೊತ್ತಾಗಿದೆ. ಕೈ ಮತ್ತು ಕಾಲಿನ ಬೆರಳುಗಳಲ್ಲಿರುವ ರಕ್ತನಾಳಗಳು ವಿಶೇಷತಃ ಸಂಕುಚಿತಗೊಳ್ಳುತ್ತವೆ. ಧೂಮಪಾನಿಗಳೆಲ್ಲರೂ ಅವರು ಸೇದುವ ಸಿಗರೇಟಿನ ಪ್ರಮಾಣಕ್ಕೆ ಅನುಗುಣವಾಗಿ ರಕ್ತನಾಳಗಳ ರೋಗಕ್ಕೆ ತುತ್ತಾಗುತ್ತಾರೆ. ಹೆಚ್ಚು ಧೂಮಪಾನ ಮಾಡುವವರು ಇತರರಿಗಿಂತ ಹೆಚ್ಚು ಪ್ರಮಾಣದಲ್ಲಿ ಹೃದಯಘಾತದಿಂದ ಮರಣ ಹೊಂದುತ್ತಾರೆ.

ಇತ್ತೀಚೆಗೆ ಅನೇಕ ದೇಶಗಳಲ್ಲಿ ಸಿಗರೇಟು ಸೇವನೆ ವಿರೋಧವಾಗಿ ಶಾಸನಮಾಡಿರೇಡಿಯೋ ಮತ್ತು ಟೆಲಿವಿಜ್ಞ ಮೂಲಕ ಸಿಗರೇಟು ಜಾಹಿರಾತನ್ನು ರದ್ದು ಮಾಡಿವೆ

ಶ್ವೇತ ಕ್ರಾಂತಿ ಅಥವಾ ಹಾಲು ಕ್ರಾಂತಿ

ಬೆಂಗಳೂರು— ಶ್ವೇತ ಕ್ರಾಂತಿ ಅಥವಾ ಹಾಲು ಕ್ರಾಂತಿ ಜಾರಿಯಾಗಲು ಕಾಲ ಒದಗಿದೆಯೆಂದೂ, ಐದನೇ ಯೋಜನೆಯಲ್ಲಿ ಅದಕ್ಕೆ ಹೆಚ್ಚು ನೆರವು ಸರಕಾರದಿಂದ ದೊರೆಯುವುದೆಂದೂ, ಪಶುಸಂಗೋಪನ ಸ್ಟೇಟ್ ಮಂತ್ರಿ ಶ್ರೀ ಎಸ್. ಚಿಕ್ಕೇ ಗೌಡರು ಈ ಸಂಬಂಧದ 'ಸೆಮಿನಾರ್'ನ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣದಲ್ಲಿ ಹೇಳಿದರು ; ರೈತರು ಕ್ಷೀರಕ್ಷೇತ್ರಗಳ ಬಗ್ಗೆ ಹೆಚ್ಚು ಉತ್ಸಾಹ ತೆಗೆದು ಕೊಳ್ಳಬೇಕೆಂದೂ ಹೇಳಿದರು – ಸೆಮಿನಾರನ್ನು ಉದ್ಘಾಟಿಸುತ್ತಾ, ಶ್ರೀ ಶ್ರೀರಾಮರೆಡ್ಡಿ ಎಂ. ಪಿ. ಯವರು, ಮಲ್ಲೂರಿನಂಥ ಗ್ರಾಮದಲ್ಲಿ ಹೂರಣದ ಜಿನ್ನಾಗಿ ಬೆಳೆದಿರುವ ಹಸುಗಳನ್ನು ನೋಡುವುದು ಆನಂದಕರವೆಂದೂ, ಮಲ್ಲೂರು ವರ್ಷಕ್ಕೆ 8 ಲಕ್ಷ ಕಿಲೊ ಹಾಲು ಉತ್ಪಾದಿಸಿ ಇಡೀ ರಾಜ್ಯದಲ್ಲೇ ಮಾದರಿ ಗ್ರಾಮವಾಗಿರುವದೆಂದು ಹೇಳಿದರು

ಆಹಾರ ವಿಜ್ಞಾನಿಗಳ ಸಮಾವೇಶ

ಮೈಸೂರು (ಡಾಡ್)— ಅಂತರ್ರಾಷ್ಟ್ರೀಯ ಜೈಲೋ ಕೆಮಿಕಲ್ ಮತ್ತು ವಾಣಿಜ್ಯ ಆಹಾರ ವಿಷಯವಾಗಿ ಕುರಿತು ಚರ್ಚಿಸಲು ವಿಜ್ಞಾನಿಗಳೂ, ಆಹಾರ ತಯಾರಕರೂ ಮೈಸೂರ್‌ನಲ್ಲಿ ಸಮಾವೇಶಗೊಂಡಿದ್ದರು. ಆಹಾರ ವಸ್ತುಗಳಲ್ಲಿ ಹಾನಿಕರ ವಸ್ತುಗಳು ಮತ್ತು ವಿಷಪೂರಿತ ಕೀಟಗಳು ಇವುಗಳಿಂದ ಹೇಗೆ ರಕ್ಷಿಸುವದೆಂಬುದನ್ನೂ ವಿಜ್ಞಾನಿಗಳು ಚರ್ಚಿಸಿದ್ದಾರೆ. (ಯೂ ಪಿ ಎಸ್)

ನವದೆಹಲಿ – ಉತ್ತರ ಪ್ರದೇಶ ಮತ್ತು ಮೈಸೂರಿನಲ್ಲಿ ಆರಿಸಲ್ಪಟ್ಟ ಭಾಗಗಳಲ್ಲಿ ಜನಸಂಖ್ಯೆ ನಿಯಂತ್ರಣ ಪ್ರಾಜೆಕ್ಟಿಗೆ ಸ್ವೀಡನ್ ಮತ್ತು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘವು ರೂ. 2½ಕೋಟಿ ಕೊಡಲಿವೆ.

ವುಡ್‌ಲ್ಯಾಂಡ್ಸ್ 16-6-72ರಿಂದ ಆಮೋಘ 7 ನೇ ವಾರ

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರೀಬಾಯಿ

ನಿರ್ದೇಶನ : ರಾತಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಿಂಹಸ್ವಪ್ನ

ಅಪೆರಾ 16 6 72 ರಿಂದ

.... ಮನಮೋಹಕ ಹಿಂದಿ ಚಿತ್ರ ....

ರಾಜಾ ನಾ ಬ್

ಈಸ್ಟ್‌ಮನ್‌ಕಲರ್

ಪಾತ್ರ : ಶಶಿಕಪೂರ್ ನಂದ ರಾಜೇಂದ್ರನಾಥ್ ಆಶಾ

ದಿಗ್ದರ್ಶನ : ಸೂರಜ್ ಪ್ರಕಾಶ್ ಸಂಗೀತ : ಕಲ್ಯಾಣ್‌ಜಿ ಆನಂದಜಿ

ದಿನ 3 ಆಟಗಳು

Contribute Liberally to the National Defence Fund

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ '
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಅನೆ - ಹುಡುಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....